3.	Shikaripura	05	Rs. 1,00,000.00
4.	Sagar	02	Rs. 40,000.00
5.	Soraba	01	Rs. 20,000.00
6.	Thirthahalli	03	Rs. 60,000.00
	Total	**20**	**Rs. 4,20,000.00**

55(316) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಇದುವರೆವಿಗೆ ಎಷ್ಟು ಹಣ ಖರ್ಚಾಗಿದೆ?

ಆ) ಜೋಗ್ ಅಭಿವೃದ್ಧಿ ಪ್ರಾಧಿಕಾರ ಯೋಜನೆ ಯಾವ ಹಂತದಲ್ಲಿದೆ?

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) 1. ಇದುವರೆಗೆ ಪ್ರವಾಸೋದ್ಯಮ ಇಲಾಖೆಯಿಂದ ರೂ. 315.59 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

2. ಜೋಗ್ ನಿರ್ವಹಣೆ ಪ್ರಾಧಿಕಾರದಿಂದ ರೂ.115.70 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಸರ್ಕಾರ ಜೋಗ್ ನಿರ್ವಹಣೆ ಪ್ರಾಧಿಕಾರ ರಚಿಸಿದ್ದು, ಜೋಗ್ ಸಮೀಪ ಲಿಂಗನಮಕ್ಕಿ ಜಲಶಾಯದ ಬಳಿ ಅಂತರರಾಷ್ಟ್ರೀಯ ಮಟ್ಟದ ಉದ್ಯಾನವನವನ್ನು ಅಭಿವೃದ್ಧಿ ಪಡಿಸುವ ಯೋಜನೆ ಹಮ್ಮಿಕೊಂಡಿದ್ದು, ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

56(467) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆ ಮತ್ತು 60.ಸಿ. ಯೋಜನೆಯಡಿಯಲ್ಲಿ ಯಾವ ಯಾವ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯಡಿ ಶಿವಮೊಗ್ಗ ಜಿಲ್ಲೆಯಲ್ಲಿ ಆರ್.ಐ.ಡಿ.ಎಫ್-2 ರಿಂದ 9 ರವರೆಗೆ ಒಟ್ಟಾರೆ 67 ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 61 ಕಾಮಗಾರಿಗಳು ಪೂರ್ಣಗೊಂಡಿವೆ.

ಪ್ರಸ್ತುತ 2004-05ನೇ ವರ್ಷದಲ್ಲಿ 1018 ಲಕ್ಷ ರೂ. ಮೊತ್ತದ 20 ರಸ್ತೆ ಕಾಮಗಾರಿಗಳ ಪ್ರಸ್ತಾವನೆಯನ್ನು ನಬಾರ್ಡ್‌ಗೆ ಸಲ್ಲಿಸಲಾಗಿದ್ದು, ನಬಾರ್ಡ್‌ನಿಂದ ಅನುಮೋದನೆ ನಿರೀಕ್ಷಿಸಲಾಗಿದೆ.

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ "60.ಸಿ" ಎಂಬ ಯಾವುದೇ ಯೋಜನೆ ಇರುವುದಿಲ್ಲ.

57(868) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಮದ್ಯದ ಅಂಗಡಿ ಸಿಎಲ್-2 ಮತ್ತು ಬಾರ್ ಸಿಎಲ್-9 ಗಳ ಸಂಖ್ಯೆ ಎಷ್ಟು:

ಆ) 2004–05ನೇ ಸಾಲಿನ ಅಬಕಾರಿ ವರ್ಷದಲ್ಲಿ ನವೀಕರಿಸದೆ ಇರುವ ಸನ್ನದ್ದುಗಳ ಸಂಖ್ಯೆ ಎಷ್ಟು?

ಇ) ನವೀಕರಿಸದಿದ್ದಲ್ಲಿ ಕಾರಣಗಳೇನು?

ಈ) ಬೆಂಗಳೂರು ನಗರದ ಮೈಸೂರು ರಸ್ತೆಯ ಎಡಭಾಗದ ಅಂಗಡಿ ಮತ್ತು ಬಾರ್‌ಗಳಿಗೆ ಕಡಿಮೆ ಪರವಾನಗಿ ಶುಲ್ಕ ಮತ್ತು ಬಲಭಾಗಕ್ಕೆ ಹೆಚ್ಚು ಪರವಾನಗಿ ಶುಲ್ಕ ವಿಧಿಸಲು ಕಾರಣವೇನು:

ಉ) ಪ್ರಸ್ತುತ 2005 ಮತ್ತು 2006 ನೇ ಸಾಲಿನಲ್ಲಿ ಈ ರೀತಿಯ ವ್ಯತ್ಯಾಸದ ಪರವಾನಗಿ ಶುಲ್ಕವನ್ನು ಸರಿಪಡಿಸಲಾಗುವುದೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ 2004–05ನೇ ಸಾಲಿನಲ್ಲಿ ಈ ವರೆಗೆ 839 ಸಿಎಲ್–2 ಮತ್ತು 1347 ಸಿಎಲ್–9 ಸನ್ನದುಗಳನ್ನು ನವೀಕರಿಸಲಾಗಿದೆ.

ಆ) 2004–05ನೇ ಸಾಲಿನಲ್ಲಿ ಈವರೆಗೆ 15 ಸಿಎಲ್–2 ಮತ್ತು 23 ಸಿಎಲ್–9 ಸನ್ನದುಗಳು ನವೀಕರಣಗೊಂಡಿರುವುದಿಲ್ಲ.

ಇ) ಲೈಸೆನ್ಸ್‌ದಾರರು ನಾನಾ ವೈಯಕ್ತಿಕ ಕಾರಣಗಳಿಂದ ಲೈಸೆನ್ಸ್‌ಗಳನ್ನು ನವೀಕರಿಸಿಕೊಳ್ಳಲು ಮುಂದೆ ಬಂದಿರುವುದಿಲ್ಲ.

ಈ) ಸರ್ಕಾರವು ಸನ್ನದು ಶುಲ್ಕವನ್ನು ಪ್ರದೇಶಕ್ಕೆ ಅನುಗುಣವಾಗಿ ನಿಗಧಿಪಡಿಸಿದ್ದು ಕಾರ್ಪೊರೇಶನ್ ಪ್ರದೇಶ, ನಗರಸಭೆ ಪ್ರದೇಶ, ಟೌನ್ ಮುನಿಸಿಪಲ್ ಕೌನ್ಸಿಲ್ ಎರಿಯಾ ಇತರೆ ಪ್ರದೇಶಗಳಿಗೆ ವಿವಿಧ ದರದಲ್ಲಿ ಸನ್ನದು ಶುಲ್ಕವನ್ನು ನಿಗಧಿಪಡಿಸಿದ್ದು, ಮೈಸೂರು ರಸ್ತೆಯ ಎಡ ಮತ್ತು ಬಲಭಾಗಗಳಲ್ಲಿ ಇರುವ ಪ್ರದೇಶಗಳಿಗೆ ಅನುಗುಣವಾಗಿ ಸನ್ನದು ಶುಲ್ಕವನ್ನು ಸನ್ನದುದಾರರಿಂದ ವಸೂಲು ಮಾಡಲಾಗಿರುತ್ತದೆ.

ಉ) ಸನ್ನದು ಶುಲ್ಕವನ್ನು ಸನ್ನದು ಕಾರ್ಯನಿರ್ವಹಿಸುತ್ತಿರುವ ಪ್ರದೇಶಕ್ಕೆ ಅನುಗುಣವಾಗಿ ನಿಗಧಿಪಡಿಸಿದ್ದು ಈ ದಿಶೆಯಲ್ಲಿ ಯಾವುದೇ ಕ್ರಮ ಕೈಗೊಳ್ಳಬೇಕಾದಲ್ಲಿ ನೀತಿ ನಿಯಮಗಳನ್ನು ರೂಪಿಸಿ ಅದರಿಂದ ರಾಜ್ಯ ಬೊಕಸಕ್ಕೆ ಉಂಟಾಗುವ ನಷ್ಟವನ್ನು ಪರಿಶೀಲಿಸಿ ನಂತರ ಕೈಗೊಳ್ಳಬೇಕಾಗಿರುತ್ತದೆ. ಅಬಕಾರಿ ನೀತಿಯನ್ನು ಮತ್ತೆ ಪರಿಷ್ಕರಿಸುವಾಗ ಈ ವ್ಯತ್ಯಾಸವನ್ನು ಸರಿಪಡಿಸುವ ಬಗ್ಗೆ ಪರಿಶೀಲಿಸಲಾಗುವುದು.

58(221) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಲಮಟ್ಟಿ ಜಲಾಶಯದ ಹಿನ್ನೀರಿನ ಭಾಧಿತ ಪ್ರದೇಶದ 100.00 ಮೀ. ದೂರದ ಅಥವಾ 523.00 ಕೌಂಟರ್ ವ್ಯಾಪ್ತಿಯ ಕಟ್ಟಡಗಳ ಭೂಸ್ವಾಧೀನ ಪ್ರಕ್ರಿಯೆಗೆ ಕಾಲಮಿತಿ ಹಾಕಿಕೊಳ್ಳಲಾಗಿದೆಯೇ? ವಿವರಿಸುವುದು.

ಆ) ಇದಕ್ಕಾಗಿ ಸರ್ಕಾರ ಎಷ್ಟು ಕೋಟಿ ರೂ.ಗಳ ವಿಶೇಷ ಪ್ಯಾಕೇಜನ್ನು ಪ್ರಕಟಿಸಲಾಗಿದೆ/

ಇ) ಇದರಲ್ಲಿ ಗುರುತಿಸಿರುವ ಕಟ್ಟಡಗಳ ಸಂಖ್ಯೆ ಎಷ್ಟು? ಇದಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ಜಾರಿಗೊಳಿಸಲಾಗಿದೆಯೇ? ಈ ಅವಧಿ ,ಈಗ ಮುಕ್ತಾಯಗೊಂಡಿದೆಯೇ?

ಈ) ಇವುಗಳ ಪೈಕಿ ಅನಧಿಕೃತ ಕಟ್ಟಡಗಳು ಎಷ್ಟು?